ಈ) ಬೈಂದೂರು ಕ್ಷೇತ್ರದ ಸರ್ಕಾರಿ ಪ್ರೌಢಶಾಲೆಗಳಲ್ಲಿ 1997-98ನೇ ಸಾಲಿನಲ್ಲಿ ಯಾವುದೇ ಹೊಸ ವಿಭಾಗಗಳನ್ನು ತೆರೆಯಲಾಗಿಲ್ಲ ಹಾಗೂ ಈ ಸಾಲಿನಲ್ಲಿ ಯಾವುದೇ ಹೊಸ ಹುದ್ದೆಗಳು ಮಂಜೂರಾಗಿಲ್ಲ.

ವಿಷಯ: ತಾಲ್ಲೂಕು ಪಂಚಾಯತ್ ಸಭೆಗಳಿಗೆ ಜಿಲ್ಲಾ ಪಂಚಾಯತ್‌ಸದಸ್ಯರು ಹಾಜರಾಗುವ ಕುರಿತು.

2467 (3165)

ಶ್ರೀ ಐ.ಎಂ.ಜಯರಾಮಶೆಟ್ಟಿ (ಬೈಂದೂರು): ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಜಿಲ್ಲಾ ಪಂಚಾಯತ್ ಸದಸ್ಯರನ್ನು ತಾಲ್ಲೂಕು ಪಂಚಾಯತ್ ಸಾಮಾನ್ಯ ಸಭೆಗಳಿಗೆ ಆಹ್ವಾನಿಸದೇ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರವು ಯಾವ ಕ್ರಮ ಕೈಗೊಂಡಿದೆ?

ಶ್ರೀ ಎಂ.ಪಿ.ಪ್ರಕಾಶ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು):

ಅ) ಹೌದು.

ಆ) ಜಿಲ್ಲಾ ಪಂಚಾಯತ್ ಸದಸ್ಯರನ್ನು ತಾಲ್ಲೂಕು ಪಂಚಾಯತ್ ಸಾಮಾನ್ಯ ಸಭೆಗಳಿಗೆ ಆಹ್ವಾನಿಸುವ ಬಗ್ಗೆ ಅಧಿನಿಯಮದಲ್ಲಿ ಅವಕಾಶ ಕಲ್ಪಿಸಿರುವುದಿಲ್ಲ

ವಿಷಯ: ಅನುದಾನಿತ ಕಾಲೇಜುಗಳಲ್ಲಿನ ನೌಕರರ ವೇತನಸಹಿತ ಸೇವಾಭದ್ರತೆ

2468 (3606)

ಶ್ರೀ ಟಿ.ಬಿ.ಜಯಚಂದ್ರ (ಕಳ್ಳಂಬೆಳ್ಳ): ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವಿದ್ಯಾರ್ಥಿಗಳ ಸಂಖ್ಯೆ ಇಳಿಮುಖ ಎಂಬ ಕಾರಣದಿಂದ 10ರಿಂದ 15 ವರ್ಷಸೇವೆ ಸಲ್ಲಿಸಿರುವ ಅನುದಾನಿತ ಪದವಿಪೂರ್ವ ಕಾಲೇಜಿನ ಉಪನ್ಯಾಸಕರಿಗೆ ವೇತನ ತಡೆಹಿಡಿದಿರುವ ಬಗ್ಗೆ ನಿಜವಲ್ಲವೇ?

ಆ) ಈ ಹಂತದಲ್ಲಿ ವೇತನ ನಿಲುಗಡೆಯಾದರೆ ಅವರ ಕುಟುಂಬಗಳ ಪಾಡೇನು?

ಇ) ವೇತನ ಸಹಿತ ಸೇವಾ ಭದ್ರತೆ ಒದಗಿಸಿ ಈ ನೌಕರರನ್ನು ಸರ್ಕಾರಿ ನೌಕರರ ರೀತಿಯಲ್ಲಿ ಪರಿಗಣಿಸುವುದು ಸೂಕ್ತವಲ್ಲವೇ?

ಈ) ರಾಷ್ಟ್ರದ ಬೇರೆ ಬೇರೆ ರಾಜ್ಯಗಳಲ್ಲಿರುವಂತೆಯೇ ''ಸೇವಾ ರಾಷ್ಟ್ರೀಕರಣ ಮಾಡಿ'' ಕ್ರಮ ಕೈಗೊಳ್ಳುವುದು ಸದರೀ ಉಪನ್ಯಾಸಕರ ಹಿತಾದೃಷ್ಟಿಯಿಂದ ಸೂಕ್ತ ಮಾರ್ಗವಲ್ಲವೆ?

ಉ) ಈಗಾಗಲೇ ಅನುಮೋದನೆಯಾಗಿರುವ ಎಲ್ಲಾ ಅನುದಾನಿತ ಖಾಸಗೀ ಪದವಿ ಪೂರ್ವ ಕಾಲೇಜುಗಳ ನೌಕರರಿಗೆ ಕೂಡಲೇ ವೇತನ ಬಿಡುಗಡೆ ಮಾಡಲು ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಹೆಚ್.ಜಿ.ಗೋವಿಂದೆಗೌಡ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು):

ಅ) ನಿಯಮಾನುಸಾರ ನಿಗದಿತ ಸಂಖ್ಯೆಯ ವಿದ್ಯಾರ್ಥಿಗಳಿಲ್ಲದೆ ದೀರ್ಘಕಾಲ ಕೆಲಸದ ಒತ್ತಡವಿಲ್ಲದೆ ಇರುವ ನಾಲ್ಕು ಜನ ಉಪನ್ಯಾಸಕರಿಗೆ ಮಾತ್ರ ವೇತನ ತಡೆಹಿಡಿಯಲಾಗಿದೆ.

ಆ) ಅನುದಾನಿತ ಖಾಸಗಿ ಶಿಕ್ಷಣ ಸಂಸ್ಥೆಗಳ ಸಿಬ್ಬಂದಿ ಮತ್ತು ಸರ್ಕಾರದ ನಡುವೆ ಸೇವಕ-ಯಜಮಾನ ಬಾಂಧವ್ಯ ಇಲ್ಲದಿರುವುದರಿಂದ ಈ ನೌಕರರಿಗೆ ವೇತನ ನೀಡುವ ಪ್ರಾಥಮಿಕ ಜವಾಬ್ದಾರಿ ಸಂಬಂಧಿಸಿದ ಆಡಳಿತ ಮಂಡಳಿಗಿರುತ್ತದೆ.

ಇ) ಖಾಸಗಿ ಅನುದಾನಿತ ಶಿಕ್ಷಣ ಸಂಸ್ಥೆಗಳ ನೌಕರರನ್ನು ಸರ್ಕಾರಿ ನೌಕರರ ರೀತಿ ಪರಿಗಣಿಸುವುದು ಸಾಧ್ಯವಾಗುವುದಿಲ್ಲ.

ಈ) 'ಅ' ಉತ್ತರದಿಂದಾಗಿ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಉ) ನಿಯಮಾನುಸಾರ ಕೆಲಸದಲ್ಲಿ ಒತ್ತಡವಿಲ್ಲದ ಉಪನ್ಯಾಸಕರಿಗೆ ಸರ್ಕಾರದಿಂದ ವೇತನ ಬಿಡುಗಡೆ ಮಾಡುವುದು ಸಮಂಜಸವಲ್ಲ.

ವಿಷಯ: ಮಂಗಳೂರಿನಲ್ಲಿರುವ ವೆನ್‌ಲಾಕ್ ಮತ್ತು ಲೇಡಿ ಗೋಷನ್ ಆಸ್ಪತ್ರೆಗಳಿಗೆ ಪಡಿತರ ವ್ಯವಸ್ಥೆಯ ಆಹಾರ ಸಾಮಗ್ರಿಗಳ ಬಿಡುಗಡೆ

2469 (3412)

ಶ್ರೀ ಕೆ.ಜಯರಾಮಶೆಟ್ಟಿ (ಉಳ್ಳಾಲ): ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಂಗಳೂರಿನಲ್ಲಿರುವ ಜಿಲ್ಲಾ ಸರ್ಕಾರಿ ಆಸ್ಪತ್ರೆಗಳಾದ ವೆನ್‌ಲಾಕ್ ಮತ್ತು ಲೇಡಿ ಗೋಷನ್ ಆಸ್ಪತ್ರೆಯಲ್ಲಿರುವ ಹಾಸಿಗೆಗಳ ಸಂಖ್ಯೆ ಎಷ್ಟು?

ಆ) ಈ ಆಸ್ಪತ್ರೆಗೆ ದಿನವಹಿ ಪೂರ್ಣಪ್ರಮಾಣದ ವೆಚ್ಚವೆಷ್ಟು?